SUBSIDY TO KANNADA FILMS

96. Sri K. H. HANUME GOWDA (Hassan).—

Will the Chief Minister be pleased to state :—

the number of Kannada films which have received subsidy from Government during 1970-71 and 1971-72 and their names ?

Sri D. DEVARAJ URS (Chief Minister).—

The Government have paid subsidy to 32 films during 1970-71 and 33 films during 1971-72. The names of the films are given in the list appended.

Government have paid subsidy to the following Features Films during 1970-71 and 1971-72 :

1.	1970-71	..	32 Films
2.	1971-72	..	33 Films

1970-71—32 Films

1. Onde Balliya Hoogalu
2. Naadinabhagya
3. Karulinakare
4. Brindavana
5. Gejje Pooje
6. Kallara Kalla
7. Rangamahal Rahasya
8. Kanneeru
9. Chowkadadeepa
10. Anireekshita
11. Arisina Kunkuma
12. Mukundachandra
13. Aparajite
14. Balekiladi
15. Ellellu Naane
16. Mruthyupanjaradalli Goodachari 555
17. Manasiddare Marga
18. Bhoopathi Ranga
19. Takka Bitray Sikka
20. Samskara
21. Mooru Muthugalu
22. Laxmi-Saraswathi
23. Bore Gowda Bangalorege Banda
24. Chaya
25. Pratheekara
26. Sedige Sedu
27. Modala Rathri
28. Amara Bharathi

29. Onde Kula Onde Daiva
30. Aidhu Beralu
31. Vichitra Samsara
32. Bale Yethu Chivarku Chithu (Telugu)

1971-72—33 *Films*

1. Mahadiya Mane
2. Aaru Mooru Ombhathu
3. Poornima
4. Sedinakidi
5. Paropakari
6. Kasthuri Nivasa
7. Naguva Hoovu
8. Kula Gowrava
9. Addadari
10. Namma Samsara
11. Sidila Mari
12. Seetha
13. Devara Makkalu
14. Sharapanjara
15. Signalman Siddappa
16. Anugraha
17. Thai-Devaru
18. Samshaya Phala
19. Baala-Panjara
20. Bethala-Gudda
21. Namma-Baduku
22. Kasiddare Kailasa
23. Malathi Madhava
24. Naari Munidare Maari
25. Kalyani
26. Vamsha Vriksha
27. Saakshathkara
28. Bhale Adrustavo Adrusta
29. Hennu, Honnu, Mannu
30. Man-peda (Malayalam)
31. Karinizhal (Malayalam)
32. Enna-Thangadi (Thulu)
33. Dareda Budedi (Thulu)

ABSTRACT

1970–71	..	Kannada Films ..	31
		Telugu Films ..	1
1971–72	..	Kannada Films ..	29
		Malayalam Films ..	2
		Thulu Films ..	2

ಶ್ರೀ ಕೆ. ಎಚ್. ಹನುಮೇಗೌಡ.— ನನ್ನ ಪ್ರಶ್ನೆಗೆ ಉತ್ತರವಾಗಿ 1970–71ನೇ ಸಾಲಿಗೆ 32 ಚಿತ್ರಗಳಿಗೂ, 1971-72ನೇ ಸಾಲಿಗೆ 33 ಚಿತ್ರಗಳಿಗೂ ಸಬ್ಸಿಡಿಯನ್ನು ಸರ್ಕಾರದವರು ಕೊಟ್ಟಿದ್ದಾರೆಂದು ಹೇಳಿದೆ. ಎಷ್ಟು ಅರ್ಜಿಗಳು ಸಬ್ಸಿಡಿ ಕೊಡಬೇಕೆಂದು ಸರ್ಕಾರಕ್ಕೆ ಬಂದಿದ್ದುವು, ಸಬ್ಸಿಡಿ ಕೊಡಬೇಕೆಂದು ಬಂದಿದ್ದ ಅರ್ಜಿಗಳಿಗೆಲ್ಲ ಸಬ್ಸಿಡಿ ಕೊಟ್ಟಿದ್ದೀರಾ ? ಆ ರೀತಿ ಸಬ್ಸಿಡಿ ಕೊಡಬೇಕಾದರೆ ಸರ್ಕಾರದ ವತಿಯಿಂದ ಏನಾದರೂ ಒಂದು ಕಮಿಟಿಯನ್ನು ರಚನೆಮಾಡಿದ್ದೀರಾ ?

† ಶ್ರೀ ಡಿ. ದೇವರಾಜ್ ಅರಸ್.— ಸಬ್ಸಿಡಿಯನ್ನು ಮೊದಲು ಕೇಳಿದವರಿಗೆಲ್ಲರಿಗೂ ಪ್ರಥಮತ-ಕೊಟ್ಟಿದೆ. ಆಮೇಲೆ ಕೆಲವಕ್ಕೆ ಮಾತ್ರ ಕೊಡಬೇಕೆಂದು ನಿರ್ಣಯ ಮಾಡಿದ್ದಾಯಿತು. ಅನಂತರ ಸಬ್ಸಿಡಿ ಕೊಡುವುದಕ್ಕೆ ಅರ್ಹತೆ ಯಾವುದು ಪಡೆದಿದೆಯೋ ಅಂತಹುಗಳಿಗೆ ಮಾತ್ರ ಕೊಡ ಬೇಕೆಂದು ಒಂದು ಸರ್ಕಾರದ ಆಜ್ಞೆಯೂ ಆಯಿತು. ಇದು ಪುರುವಾದುದು ಮೊದಲು 1966ರಲ್ಲಿ. ಮೊದಲು 30 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಪುರು ಮಾಡಿದ್ದರು. ಆ ಮೇಲೆ 50 ಸಾವಿರ ರೂಪಾಯಿಗಳವರೆಗೂ ಏರಿಸಿದೆ. ಅನಂತರ ಗ್ರಾಂಟ್ ಆಫ್ ಸಬ್ಸಿಡಿ ಅಮೆಂಡ್‌ಮೆಂಟ್ ರೂಲ್ಸ್ ಮಾಡಿದಮೇಲೆ 1970 ರಲ್ಲಿ ಸಬ್ಸಿಡಿಯನ್ನು ಕೆಲವೇ ಫಿಲಂಗಳಿಗೆ ಅವುಗಳ ಯೋಗ್ಯತೆಯ ಮೇಲೆ ಕೊಡಲಾಯಿತು. 1971 ರಲ್ಲಿಯೂ ಸಹ ಅವುಗಳ ಮೆರಿಟ್ ನೋಡಿ ಕೊಡಲಾಯಿತು. ಅದಕ್ಕೆ ಒಂದು ಅಪ್ರೈಜರಿ ಕಮಿಟಿಯೂ ಸಹ ಇದೆ ಆ ಕಮಿಟಿಯವರು ಎಲ್ಲವನ್ನೂ ರಿವ್ಯೂ ಮಾಡಿ ಶಿಫಾರಸುಗಳನ್ನು ಮಾಡುವ ಪ್ರಕಾರ ಸಬ್ಸಿಡಿಗಳನ್ನು ಕೊಡಲಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.— ಈಗ ಈ ಸಬ್ಸಿಡಿಯನ್ನು ಯಾವ ಉದ್ದೇಶದಿಂದ ಕೊಡು ತ್ತಿದ್ದೀರಿ ?

ಶ್ರೀ ಡಿ. ದೇವರಾಜ್ ಅರಸ್.— ಕನ್ನಡ ಚಲನಚಿತ್ರಗಳ ತಯಾರಿಕೆ ಉದ್ದಿಮೆ ಏನಿದೆ ಅದು ಇನ್ನೂ ಹೆಚ್ಚಿಗೆ ಬೆಳೆಯಲಿ ಎಂಬ ಉದ್ದೇಶದಿಂದ ಸಬ್ಸಿಡಿಯನ್ನು ಕೊಡಲಾಗುತ್ತಿದೆ.

ಶ್ರೀ ಕೆ. ಎಚ್. ಹನುಮೇಗೌಡ.— ಆ ಕಮಿಟಿಯ ಸದಸ್ಯರು ಯಾರು ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರಿಗೆ ಬೇಕಾದರೆ ಅದನ್ನು ತರಿಸಿಕೊಡುತ್ತೇನೆ, ಈಗ ಅದು ನನ್ನಲ್ಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ತಾವು ಪರಿಶಿಷ್ಟದಲ್ಲಿ ಕೊಟ್ಟಿರುವ ಪಟ್ಟಿಯ ಪ್ರಕಾರ ನೋಡಿದರೆ, ತಾವು ಸಬ್ಸಿಡಿಯನ್ನು ಒಂದು ತೆಲಗು ಚಿತ್ರಕ್ಕೂ, ಮಲೆಯಾಳಂ ಮತ್ತು ತುಳು ಭಾಷೆಯ ಎರಡೆರಡು ಚಿತ್ರಗಳಿಗೂ ಕೊಟ್ಟಿದ್ದೀರಿ. ಇದರ ಬಗ್ಗೆ ಸರ್ಕಾರದ ಧೋರಣೆ ಏನೆಂಬುದೇ ಗೊತ್ತಾಗಲಿಲ್ಲ. ಸಬ್ಸಿಡಿಯನ್ನು ಕೇವಲ ಕನ್ನಡ ಫಿಲಂಗಳಿಗೆ ಮಾತ್ರ ಕೊಡಬೇಕೆಂಬ ಉದ್ದೇಶವೋ ಅಥವಾ ಎರ್ನಾ ಭಾಷೆಗಳ ಫಿಲಂಗಳಿಗೂ ಕೊಡಬೇಕೆಂಬ ಉದ್ದೇಶವೋ ? ಅದರ ಬಗ್ಗೆ ನನಗೆ ವಿವರಣೆ ಬೇಕು.

ಶ್ರೀ ಡಿ. ದೇವರಾಜ್ ಅರಸ್.— ಮಾನ್ಯ ಸದಸ್ಯರು ಪರಿಶಿಷ್ಟದಲ್ಲಿ ಕೊಟ್ಟಿರುವ ಪಟ್ಟಿಯನು ನೋಡಿದ್ದಾದ ಮೇಲೆ ಅವರಿಗೇ ಅದು ಅರ್ಥವಾಗಿರಬೇಕು. ಆ ರೀತಿಯಾಗಿ ಬೇರೆ ಚಿತ್ರಗಳಿಗೂ ಸಬ್ಸಿಡಿ ಕೊಟ್ಟಿರುವುದರಿಂದ, ಬೇರೆಯವರಿಗೂ ಪ್ರೋತ್ಸಾಹ ಕೊಟ್ಟಿದೆಯೆಂಬುದು ಚೆನ್ನಾಗಿ ಅರ್ಥ ವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಚ್ಚಿಗೆ ಕನ್ನಡ ಚಿತ್ರಗಳಿಗೆ ಮತ್ತು ಕನ್ನಡ ಭಾಷೆಗೆ ಪ್ರೋತ್ಸಾಹ ಕೊಡಬೇಕೆಂದು ಹೇಳುವಾಗ, ಈಗ ಬೇರೆ ಭಾಷೆಗಳ ಚಿತ್ರಗಳಿಗೂ ಸಹಾಯಧನ ಕೊಡುವ ಔಚಿತ್ಯವಾದರೂ ಏನು ? ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳಿಗೂ ನೀವು ಕೊಡುವ ರೀತಿ ಯಲ್ಲಿ ಸಹಾಯಧನ ಕೊಡುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆಯೇ ?

ಶ್ರೀ ಡಿ. ದೇವರಾಜ್ ಅರಸ್.— ಸರ್ವೇಸಾಧಾರಣವಾಗಿ ಕನ್ನಡ ಪಿಕ್ಚರ್‌ಗಳಿಗೇ ಹೆಚ್ಚಿಗೆ ಸಹಾಯಧನ ಕೊಡುವುದೇ ವಾಡಿಕೆ. ಸಬ್ಸಿಡಿಯನ್ನು ಸುಮಾರು 70—80 ಕನ್ನಡ ಪಿಕ್ಚರ್‌ಗಳಿಗೆ ಸುಮಾರು ಎರಡು ವರ್ಷಗಳಿಂದಲೂ ಕೊಡಲಾಗಿದೆ. ಎಲ್ಲೋ ಅಲ್ಲಿ ಇಲ್ಲಿ ಎರಡು ಮೂರು ಬೇರೆ ಭಾಷೆಯ ಪಿಕ್ಚರ್‌ಗಳಿಗೂ ಸಹಾಯಧನವನ್ನು ಕೊಟ್ಟಿರಬಹುದು. ಮಂಗಳೂರಿನವರು ಮತ್ತು ಕೊಡಗಿನವರು ಎಲ್ಲರೂ ನಮ್ಮ ಸ್ಥಳದವರೇ. ಅವರೂ ಸಹ ಸಹಾಯಧನವನ್ನು ಕೊಡಬೇಕೆಂದು ಕೇಳಿದ್ದರು. ಅವರ ಪಿಕ್ಚರ್ ಚೆನ್ನಾಗಿದೆಯೆಂದು ತಿಳಿದುಬಂದ ಮೇಲೆ ಸರ್ಕಾರದವರು ಡಿಸ್‌ಕ್ರಿಷನ್ ಉಪಯೋಗಿಸಿ ಆ ರೀತಿಯಾಗಿ ಅವರಿಗೂ ಸಹಾಯಧನವನ್ನು ಕೊಟ್ಟಿದ್ದಾರೆ.

ಶ್ರೀ ಟಿ. ಎಂ. ಮುಂಜುನಾಥ.— ಸ್ವಾಮಿ ನಮ್ಮ ಕನ್ನಡ ಚಲನ ಚಿತ್ರಗಳು ಸಮಾಜದ ಮೇಲೆ ಕೆಟ್ಟ ಪರಿಣಾಮವನ್ನು ಬೀರುವುದಾಗಿದ್ದರೆ ಅಥವಾ ಜನರನ್ನು ದುರ್ಮಾರ್ಗಕ್ಕೆ ಎಳೆಯುವುದಾಗಿದ್ದರೂ ಅಂಥ ಚಲನಚಿತ್ರಗಳಿಗೂ ಸಬ್ಸಿಡಿಯನ್ನು ಕೊಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.— ಸಬ್ಸಿಡಿಯನ್ನು ಕೊಡುವಾಗ ಚಿತ್ರಗಳನ್ನು ಆಯ್ಕೆ ಮಾಡಿ ಕೊಡಲಾಗುತ್ತದೆ. ಎಲ್ಲಾ ಚಲನಚಿತ್ರಗಳಿಗೂ ಸಬ್ಸಿಡಿಯನ್ನು ಕೊಡುವುದಿಲ್ಲ ಮತ್ತು ಆದನ್ನೆಲ್ಲಾ ಸೆನ್ಸಾರ್ ಮಾಡಿ ನೋಡುವುದಕ್ಕಾಗಿ ಒಂದು ಪ್ರತ್ಯೇಕವಾದ ಬೋರ್ಡೇ ಇದೆ.

ಒಬ್ಬ ಮಾನ್ಯ ಸದಸ್ಯರು.— ಶ್ರೀ ವಾಟಾಳರು 'ಥಲದಂಕಮಲ್ಲ' ಎಂಬ ಒಂದು ಚಲನಚಿತ್ರವನ್ನು ತಯಾರಿಸುತ್ತಿದ್ದಾರೆ. ಅದಕ್ಕೆ ಸರ್ಕಾರದವರು ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಚಲನಚಿತ್ರ ತಯಾರಾಗುವುದಕ್ಕೆ ಮೊದಲೇ ಸಬ್ಸಿಡಿಯನ್ನು ಕೊಡಬಹುದೆಂದು ಈ ಸಭೆಯವರು ಒಂದು ನಿರ್ಣಯವನ್ನು ಪಾಸ್ ಮಾಡಿದರೆ ಆಗ ಸರ್ಕಾರದವರು ಕೆಲವಕ್ಕೆ ಅಡ್ವಾನ್ಸಾಗಿ ಸಬ್ಸಿಡಿಯನ್ನು ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.— ಇನ್ನು ಮುಂದಕ್ಕೂ ಕನ್ನಡ ಚಲನಚಿತ್ರಗಳಿಗೆ ಅವುಗಳ ಅಭಿವೃದ್ಧಿಯ ದೃಷ್ಟಿಯಿಂದ 50 ಸಾವಿರ ರೂಪಾಯಿಗಳ ಸಹಾಯಧನ ಕೊಡತಕ್ಕ ಪದ್ಧತಿಯನ್ನು ಮುಂದುವರಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅದೇ ಸಬ್ಸಿಡಿ ಈಗಲೂ ಮುಂದುವರಿಯುತ್ತಿದೆ.

ಶ್ರೀ ವಿ. ಎನ್. ಪಾಟೀಲ್.—ಈಗ ಸರ್ಕಾರದವರು ರಾಜ್ಯದಲ್ಲಿ ಮೈನಾರಿಟಿ ಲ್ಯಾಂಗ್ವೇಜಿಗೂ ಸಹಕಾರ ನೀಡಿದ್ದನ್ನು ನಾನು ಶ್ಲಾಘನೆ ಮಾಡುತ್ತೇನೆ. ಅದೇ ರೀತಿ ರಾಜ್ಯದಲ್ಲಿ ಮೈನಾರಿಟಿ ಭಾಷೆಗಳಾದ ಮರಾಠಿ ಮತ್ತು ಉರ್ದು ಭಾಷೆಗಳಲ್ಲಿ ತಯಾರಾಗತಕ್ಕ ಚಲನಚಿತ್ರಗಳಿಗೂ ಸಹಾಯಧನವನ್ನು ನೀಡಿ ನಮ್ಮ ಅಕ್ಕಪಕ್ಕದ ರಾಜ್ಯದವರೂ ಸಹಾ ಇಲ್ಲಿ ನಮ್ಮ ಸರ್ಕಾರ ಅನುಸರಿಸತಕ್ಕ ಪದ್ಧತಿಯನ್ನೇ ಅವರೂ ಅನುಸರಿಸುವಂತೆ ಒಂದು ಪಾಲಿಸಿಯನ್ನು ನಮ್ಮ ಮುಖ್ಯಮಂತ್ರಿಗಳು ತಯಾರಿಸುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಬೇರೆ ರಾಜ್ಯದಲ್ಲೂ ನಮ್ಮ ಕನ್ನಡ ಭಾಷೆಗೆ ಉತ್ತೇಜನ ಕೊಡಲಾಗುತ್ತಿದೆ. ಒಂದು ವೇಳೆ ಹಾಗೆ ಅಲ್ಲಿ ಕೊಡಲೆ ಕೊಡದೆ ಇರಲಿ, ಅಲ್ಲಿ ಅವರು ಕೊಡಲಿಲ್ಲ ಎಂದು ಇಲ್ಲಿ ನಾವು ಆ ಭಾಷೆಗಳ ಬಗ್ಗೆ ಸಹಾಯ ನಿಲ್ಲಿಸುವುದು ಅಷ್ಟು ಸೂಕ್ತವಲ್ಲ ಎಂದು ನನ್ನ ಅಭಿಪ್ರಾಯ. ನಾವು ಎಲ್ಲರಿಗೂ ನಮ್ಮ ಔದಾರ್ಯವನ್ನು ತೋರಿಸೋಣ.

ಶ್ರೀ ಕೆ. ಎಂ. ನಾಗಣ್ಣ.—ಮೈನೂರು ಸರ್ಕಾರದವರು ತೆಲುಗು ಮತ್ತು ಬೇರೆ ಭಾಷೆಗಳ ಚಲನಚಿತ್ರಗಳಿಗೂ ಪ್ರೋತ್ಸಾಹ ನೀಡುತ್ತಾರೆಂಬುದನ್ನು ಕೇಳಿ ಹೊರಗಡೆಯಿಂದ ಅನೇಕರು ಇಲ್ಲಿಗೆ ಬಂದು ಇಲ್ಲಿ ಸ್ಟೂಡಿಯೋಗಳನ್ನು ಕಟ್ಟುವುದಕ್ಕೆ ಪ್ರಾರಂಭಮಾಡಿದ್ದಾರೆ. ಆದ್ದರಿಂದ ಈ ಸಬ್ಸಿಡಿ ಕೊಡುವುದನ್ನು ಕನ್ನಡ ಚಿತ್ರಗಳಿಗೆ ಮಾತ್ರವೇ ಸಲ್ಲುವಂತೆ ನಿಗದಿಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಸರ್ಕಾರಕ್ಕೆ ನಮ್ಮ ರಾಜ್ಯದಲ್ಲಿ ಎಲ್ಲಾ ಚಲನಚಿತ್ರಗಳಿಂದಲೂ ವರಮಾನ ಬರುತ್ತಿದೆ. ಬರಿ ಕನ್ನಡ ಚಲನಚಿತ್ರ ಒಂದರಿಂದಲೇ ಅಲ್ಲ. ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಎಲ್ಲಾ ಚಿತ್ರಗಳಿಂದಲೂ ಬರುತ್ತಿದೆ. ಆದ್ದರಿಂದ ಸಬ್ಸಿಡಿಯನ್ನು ಕನ್ನಡ ಚಲನಚಿತ್ರ ಒಂದಕ್ಕೇ ಎಂದು ನಿಯಮಿತಿಗೊಳಿಸುವುದು ತಾತ್ವಿಕವಾಗಿ ಸಾಧುವಾಗುವುದಿಲ್ಲ. ಹೊರಗಡೆಯಲ್ಲಿ ತಯಾರು ಆಗತಕ್ಕ ತೆಲುಗು ಚಿತ್ರಗಳಿಗೆ ಇಲ್ಲಿ ನಾವು ಪ್ರೋತ್ಸಾಹ ಕೊಡುವುದಿಲ್ಲ. ಇಲ್ಲಿ ಆ ಚಿತ್ರಗಳು ತಯಾರಾಗಬೇಕಾದರೆ ಇಲ್ಲಿ ಅದಕ್ಕೆ ಸ್ಟೂಡಿಯೋ ಬೇಕು, ಪ್ರೊಸೆಸಿಂಗ್ ಯೂನಿಟ್ ಬೇಕು ಆದರಿಂದ ನಮ್ಮ ರಾಜ್ಯದಲ್ಲಿ ಆ ಇಂಡಸ್ಟ್ರಿ ಮುಂದುವರಿಯುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.— ನಮ್ಮಲ್ಲಿ ಅನೇಕ ಕಿರಿಯ ಕಲಾವಿದರಿಗೆ ಅಗತ್ಯವಾಗಿ ಬೇಕಾದ ತರಬೇತಿಗೆ ಅವಕಾಶವಿಲ್ಲದೆ ಅವರಿಗೆ ಬಹಳ ತೊಂದರೆಯಾಗಿದೆ. ಅವರಿಗೆ ಒಳ್ಳೆಯ ಟ್ರೈನಿಂಗನ್ನು ಒದಗಿಸುವುದಕ್ಕೆ ಸರ್ಕಾರದವರು ಒಂದು ವ್ಯವಸ್ಥೆಯನ್ನು ಮಾಡುವರೇ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರ ಸಲಹೆ ಬಹಳ ಸಾಧುವಾದುದ್ದು. ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ನಮಲ್ಲಿ ಫಿಲಂ ಬೋರ್ಡಿದೆ.